ಓ.ಎಸ್.183/2021 ಪಿ.ಡಬ್ಲು-2
*ನಾಗಪ್ಪ ತಂದೆ ಬಸಪ್ಪ*

ದಿ.02-09-2024.ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಶ್ರಿ ಕೆ.ಕೆ.ವಿ. ವಕೀಲರಿಂದ 3 ರಿಂದ 7 ನೇ ಪ್ರತಿವಾದಿಗಳ ಪರ:-**

ಈ ದಾವೆಯನ್ನು ಮದನಸಾಬನು ಭೀಮವ್ವ ಮತ್ತು ಅವರ ಮಕ್ಕಳ ಮತ್ತು ಮೊಮ್ಮಕ್ಕಳ ಮೇಲೆ ಹಾಕಿರುತ್ತಾನೆ. ಭೀಮವ್ವಳ ಮಕ್ಕಳ ಮತ್ತು ಮೊಮ್ಮಕ್ಕಳ ಹೆಸರು ನನಗೆ ಗೊತ್ತಿಲ್ಲ. ವಾದಿಯು ಈ ದಾವೆಯನ್ನು ಹೊಲದ ಸಂಬಂಧವಾಗಿ ಹಾಕಿರುತ್ತಾನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ವಾದಿಯು ಯಾರ ಸಮಕ್ಷಮ ದಾವಾ ಆಸ್ತಿ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಸಾಗುವಳಿ ಮಾಡಿದಾಗಿನಿಂದ ನನಗೆ ಗೊತ್ತಿರುತ್ತದೆ. ವಾದಿಯು ಹೊಲವನ್ನು ಭೀಮವ್ವ ಮತ್ತು ಅವರ ಮಗನ ಕಡೆಯಿಂದ ಖರೀದಿ ಮಾಡಿರುತ್ತಾನೆ. ಖರಿದಿ ಪತ್ರಕ್ಕೆ ನಾನು ಸಾಕ್ಷಿಯಾಗಿರುವುದಿಲ್ಲ. ಭೀಮವ್ವಳ ಕುಟುಂಬದವರ ಬಗ್ಗೆ ನನಗೆ ಮಾಹಿತಿ ಇಲ್ಲ. ಭೀಮವ್ವ ಮತ್ತು ಅವರ ಮಕ್ಕಳು ಹನುಮಂತ ಮತ್ತು ಸಿದ್ದಮ್ಮ ಹಾಗೂ ಮೊಮ್ಮಕ್ಕಳು ಹೆಸರು ಗೊತ್ತಿಲ್ಲ. ಹನುಮಂತನ ಹೆಂಡತಿ ಹೆಸರು ನನಗೆ ಗೊತ್ತಿಲ್ಲ. ದಾವಾ ಸರ್ವೆ ನಂಬರಿನಲ್ಲಿ ಒಟ್ಟು 26 ಎಕರೆ 1 ಗುಂಟೆ ಇದ್ದು ಅದರಲ್ಲಿ ಮದನಸಾಬನು 4 ಎಕರೆ ಖರೀದಿ ಮಾಡಿರುತ್ತಾನೆ. ಭೀಮವ್ವ ಮತ್ತು ಆಕೆಯ ಮಕ್ಕಳು ಮೊದಲು ಕೂಡಿ ಇದ್ದು ಈಗ ಭಾಗ ಮಾಡಿಕೊಂಡಿರುತ್ತಾರೆ. ಮಲ್ಲಮ್ಮ ಮಸ್ಕಿಯಲ್ಲಿ ಇರುತ್ತಾಳೋ ಕರಡಕಲ್ಲಿನಲ್ಲಿ ಇರುತ್ತಾಳೋ ನನಗೆ ಗೊತ್ತಿಲ್ಲ. ಮೊದಲು 18-19 ವರ್ಷ ಕರಡಕಲ್ಲಿನಲ್ಲಿದ್ದು ಈಗ ಎಲ್ಲಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಹನುಮಂತನ ಹೆಂಡತಿಯನ್ನು ಭೀಮವ್ವ ಮತ್ತು ಸಿದ್ದಮ್ಮ ಮನೆಯಿಂದ ಹೊರ ಹಾಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ. 1998 ರಲ್ಲಿ ಮಲ್ಲಮ್ಮ ಮತ್ತು ಅವರ ಮಕ್ಕಳು ಭೀಮವ್ವ ಮತ್ತು ಇತರರು ವಿರುದ್ದ ಭಾಗದ ಸಲುವಾಗಿ ದಾವೆ ಮಾಡಿದ್ದಳು ಎಂದರೆ ನನಗೆ ಗೊತ್ತಿಲ್ಲ. ಆ ದಾವಾದಲ್ಲಿ ಅವರಿಗೆ ಪಾಲು ಬಂದಿದ್ದು ಆ ಪ್ರಕಾರ ಅವರ ಹೆಸರಿಗೆ ಮುಟೆಷನ್ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ನಾನು 6 ನೇ ಪ್ಯಾರಾದಲ್ಲಿ ಹೇಳಿದಂತೆ ಹೇಳಿದ ವಿಷಯಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ದಾವಾ ಆಸ್ತಿಯನ್ನು ಸಾಗುವಳಿ ಮಾಡುತ್ತಿದ್ದರಿಂದ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕೇಸಿನಲ್ಲಿ ನನಗೆ ಯಾವುದೇ ವಿಷಯ ಗೊತ್ತಿಲ್ಲದಿದ್ದರೂ ಸಹ ವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಮಾಣ ಪತ್ರದಲ್ಲಿರುವ ಎಲ್ಲ ವಿಷಯಗಳು ಸುಳ್ಳು ಇವೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಶ್ರೀ ಪಿ.ಜೆ.ಕೆ ವಕೀಲರಿಂದ 1 ಮತ್ತು 2 ನೇ ಪ್ರತಿವಾದಿಗಳ ಪರ:-</u>**

ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ..
ಲಿಂಗಸಗೂರು.